ಬರಾ ಗಂಡಸಿಗೂ ತನಗೂ ಒಂದೇ ಫರಕ್ ಕಾಣ್ತಿತ್ತು. ತಾನು ಈ ಜಾಗಕ್ಕೆ ಗತಿ ಇಲ್ದೇ ಬಂದಾಳ, ಅವ್ನು ಗತಿ ತಪ್ಪಿ ಬಂದಾನ. ಅಷ್ಟೇ!

ಆತನ ಕಡೆ ನೋಡಿ ಸುಮ್ನೆ ನಕ್ಕಳು ಪದ್ಮ. ಆಕೆ ನಗುವಿನ್ಯಾಗ ಜೀವ ಇಲ್ಲ ಅನ್ನಾದು ಆತಗ ಖುಲ್ಲಂಖುಲ್ಲ ಗೊತ್ತಾಗೋಯ್ತು. ಆತ ಏನೂ ಮಾತಾಡ್ಲಿಲ್ಲ. ಸತ್ತು ಬದುಕಿದಂಗಿದ್ದ... ಅಥವಾ ಬದುಕಿ ಸತ್ತಂತಾಗಿದ್ದ ಆಕೀನ ಸ್ವಲ್ಪ ಹೊತ್ತು ಸುಮ್ನೇ ನೋಡಾಕ್ಕ ಹತ್ತಿದ. ಆತನ ದೃಷ್ಟಿ ತನ್ನೊಳಗಿಂದ ತೂರಿ ಹೊಕ್ಕು ಆರ್‌ಪಾರ್ ಆದಂಗೆನಿಸಿತು ಆಕೆಗೆ. ಆತನ ಕಣ್ಣುಗಳು ತನ್ನೊಳಗಿನ ಶೂನ್ಯವನ್ನ ತಡಕಾಡ್ತಿರಾದು ಆಕೆಗೆ ಗೊತ್ತಾಗಿಬಿಟ್ಟಿತ್ತು. ಈಕೀನ ನೋಡಿ ಆತ ನಗಲೇ ಇಲ್ಲ.

ಆತನ್ನ ತನ್ ರೂಮಿನ್ಯಾಗ ಕರಕಂಡು ಬಂದ್ಲು ಪದ್ಮ. ಆತ ಮಂಚದ ಮ್ಯಾಲ ಕುಂದ್ರಲಿಲ್ಲ. ಬಗಲಾಗಿನ ಕುರ್ಚ್ಯಾಗ ಕುಂತಗಂಡ. ಆಕೆ ಮಂಚದ ಮ್ಯಾಲ ಕುಂತಗಂಡ್ಲು.

''ಸಿಗರೇಟ್ ಕುಡೀಬೌದಾ?''

ಆಕಿಗೆ ಆಶ್ಚರ್ಯ ಆಯ್ತು. ಇಂಗಂತ ಆಕೀನ್ನ ಯಾರೂ ಕೇಳಂಗಿಲ್ಲ. ಡೈರೆಕ್ಟ್ ಮಂಚ ಹತ್ತಿಗೆಂತರ. ಸಿಗರೇಟ್ ಹಚಿಗೆಂತರ. ನಮ್ಮ ರೈಚೂರು ಕಡೇವ್ರಂತೂ ಅಲ್ಲ ಅಂದಂಗಾಯ್ತು ಅಂದಕಂಡ್ಲು ಆಕೆ. ಮಂಚ ಇಳ್ದು, ಆ್ಯಶ್‌ಟ್ರೇ ತಗಂಬಂದು ಆತನ ಮುಂದಿಟ್ಲು. ಆತ ಸಿಗರೇಟ್ ಹಚ್ಚಿಗೆಂಡು, ಎಕಡೋ ನೋಡಿಕೆಂತ ಕುಂತುಬುಟ್ಟ. ಫಸ್ಟ್ ಟೈಮ್ ಆತನ್ನ ಮ್ಯಾಗಿಂದ ಕೆಳಗ ಛೊಲೋ ಹೊತ್ತಿನ್ಯಾಗ ನೋಡಿದ್ಲು ಪದ್ಮ. ಗುಂಗ್ರುಗೂದ್ಲು – ಅರ್ಧ ನೆರಕಂಡಾವ. ಮೂಗು ಉದ್ದಕ ಐತೆ. ತುಟಿಗಳು ಚಂದ ಅದಾವ. ಮುಚಿಗೆಂಡು ಹೋದ ಕವಿತೂತು. ಎಲ್ಲಕ್ಕಿಂತ ಛೊಲೋ ಕಂಡಿದ್ದು ಆತನ ಕರಿ ಮುಖದಾಗಿನ ಬಿಳಿ ಕಣ್ಣುಗಳು. ಬಿಳಿ ಪ್ಯಾಂಟು. ನೀಲಿ ಅಂಗಿ. ಹೆಚ್ಚು ಕಡಿಮೆ ಒಂದು ಐವತ್ತು ವರ್ಷ ಇದ್ದಾವು!

''ನಿಮ್ದು ಇದೇ ವೂರಾ?'' ಕೇಳಿದ್ಲು ಪದ್ಮ.

ಆಕಿ ಅನ್ನಾಕಿ ಒಬ್ಬಾಕಿ ರೂಮಿನ್ಯಾಗ ಅದಾಳ ಅನ್ನಾ ವಿಷ್ಯಾ ಅವಾಗ್ಲೇ ಗೊತ್ತಾಯ್ತೇನೋ ಅನ್ನಂಗ ಆಕೀ ಕಡಿ ತಿರುಗಿ ನೋಡಿದ ಆತ.

''ಅಲ್ಲ.''

''ಕೆಲ್ಸದ ಮ್ಯಾಲ ಬಂದೀರೇನು?''

''ನನಗೇನೂ ಕೆಲ್ಸ ಇಲ್ಲ. ಸುಮ್ನೇ ಬಂದೀನಿ.''

''ಸೊಂತೂರು ಯಾವ್ದು?''

''ಇರುಪಾಪುರ ಗಡ್ಡಿ.''

ಆಕೀಗೆ ನಗು ತಡ್ಯಾಕಾಗ್ಲಿಲ್ಲ.

ಪಕ್ಕಂತ ನಕ್ಕುಬುಟ್ಲು.

''ಯಾ ಗಡ್ಡಿ?''

''ಇರುಪಾಪುರ ಗಡ್ಡಿ. ನದಿ ಬಗಲಾಗ ಇರಾದು.''

''ಡ್ಯಾಮಿನಾಗ ನೀರು ಬುಟ್ರೆ ನಡುಗಡ್ಡೆ ಆದಂಗ ಆಗ್ತದಲ್ಲ ಆ ವೂರಾ?''

''ಅದೇ... ನನ್ನ ಈಗಿನ ಪರಿಸ್ಥಿತಿ ಗೂಡ ಅದೇ.''

ಆತನ ಮಾತು ಕೇಳಿ ಸ್ವಲ್ಪೊತ್ತು ಸುಮ್ನೆ ಕುಂತ್ಲು ಪದ್ಮ. ಯಾಕೋ ಆತ ಮನಸಿಟ್ಟು ಸಿಗರೇಟ್ ಸೇದವಲ್ಲ ಅಂತ ಅನ್ನುಸ್ತು ಆಕೀಗೆ.

''ಯಾಕ್ ಸರ್... ಮನಸು ಬೇಸಿಲ್ಲೇನು?''

ಇಲ್ಲ ಅನ್ನಂಗ ತಲೆಯಾಡ್ಸಿ ಆತ ಆ್ಯಶ್‌ಟ್ರೇನ್ಯಾಗ ಸಿಗರೇಟು ಬಿಸಾಕಿದ.

''ದಿನಕ್ಕ ಎಷ್ಟು ಸಿಗರೇಟ್ ಸೇದ್ತೀರಿ?''